INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -5, September-October, 2023,
PageNo,15-20
Peer -Reviewed, Refereed Journal

# ನುಗುನಾಡು ಪ್ರದೇಶದ ಅರಹು–ಕುರುಹು

**ಸೋಮಶೇಖರ ಟಿ.ಡಿ.**[1]

ಹಾಸನ ಜಿಲ್ಲೆಯ ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಶ್ರವಣಬೆಳಗೊಳವನ್ನು ಬಿಟ್ಟರೆ ತನ್ನೊಡಲೊಳಗೆ ಅಪಾರವಾದ ಶಿಲ್ಪಕಲಾ ಸೌಂದರ್ಯ, ಸುಧೀರ್ಘ ಇತಿಹಾಸ, ವೈಶಿಷ್ಟ್ಯ ಪೂರ್ಣ ಸ್ಥಳನಾಮ ಹಾಗೂ ಪ್ರಾಚೀನ ಪರಂಪರೆಗಳಿಂದ ನುಗ್ಗೇಹಳ್ಳಿಯೇ ಹೆಚ್ಚು ಪ್ರಸಿದ್ಧವಾಗಿದೆ. ಹೊಯ್ಸಳ ಮತ್ತು ವಿಜಯನಗರ ರಾಜ ಸಂತತಿಗಳ ಐತಿಹಾಸಿಕ ಕುರುಹುಗಳನ್ನು ತನ್ನ ಮಡಿಲಲ್ಲಿಟ್ಟು ಪೋಷಿಸುತ್ತಾ ಬಂದಿರುವ ನುಗ್ಗೇಹಳ್ಳಿ ಹಿಂದೊಮ್ಮೆ ಆಧ್ಯಾತ್ಮದ ಸದೃಢ ಚಿಂತನೆಗಳನ್ನು ತನ್ನೊಳಗೆ ಮೇಳೈಸಿಕೊಂಡಿದ್ದ ಪ್ರತಿಷ್ಠಿತ ಅಗ್ರಹಾರವಾಗಿತ್ತು. ಇದರ ಮೂಲ ಹೆಸರು **ವಿಜಯ ಸೋಮನಾಥಪುರ**ವೆಂದು ಶಾಸನಗಳು ತಿಳಿಸುತ್ತವೆ. ಶಿಷ್ಠ ಸಂಸ್ಕಾರಗಳಿಗೆ ಆಧ್ಯಾತ್ಮಿಕ ವಿಚಾರಧಾರೆಗಳಿಗೆ ಮಾನ್ಯತೆ ನೀಡಿದ ಈ ಅಗ್ರಹಾರದ ವಾಸಿಗಳು ಹೊಯ್ಸಳ ದೊರೆಗಳ ಚಿಂತನೆಗಳನ್ನು ಸಾಕಾರಗೊಳಿಸುವ ಪ್ರಯತ್ನದಲ್ಲಿ ಶ್ಲಾಘನೆಗೆ ಪಾತ್ರವಾಗಿದ್ದರು ಎಂಬುದು ಇಲ್ಲಿ ಲಭ್ಯವಾಗುವ ಶಾಸನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ; ಲಭ್ಯವಾಗುವ ಮಾಹಿತಿಯೇ ಆಗಿರುತ್ತದೆ. ಇಲ್ಲಿಯ **ಲಕ್ಷ್ಮೀ ನರಸಿಂಹಸ್ವಾಮಿ, ಸದಾಶಿವ, ಜಯಗೊಂಡೇಶ್ವರ ಹಾಗೂ ಸೋಮೇಶ್ವರ** ದೇವಾಲಯಗಳ ಸೌಂದರ್ಯವನ್ನು ನೋಡಿಯೇ ಅನುಭವಿಸಬೇಕು. ಹಾಗಾಗಿಯೇ ನುಗ್ಗೇಹಳ್ಳಿಯು ವೀರ ಪುರುಷರ ಮಹಾಸತಿಯರ ವೀರಭೂಮಿಯಾಗಿ ಕಂಡಿದೆ. **"ನುಗುನಾಡಾಧಿಪತಿ ರವಿಗನ! ಮಗಳಾಗಿಯುಮನ್ತೆ ನವಿಲೆನಾಡಧಿ ಪತಿಗಾಂ!! ನೆಗಳೆ ಸತಿಯಾಗಿ ಬಾಳ್ವುದು! ಬಗೆದರ್ಪನೆ ಕೊಟ್ಟ ಕೊಂಡಮನೆಯ ಯಸಮಳಿಯಲ್!!"**

ನುಗುನಾಡ ಅಧಿಪತಿಯಾದ ರವಿಗನ ಮಗಳು ಹಾಗೂ ನವಿಲೆನಾಡಿನ ಅಧಿಪತಿಯ ಸತಿಯಾದ ದೇಕಬ್ಬೆಯು,ಸತಿಸಹಗಮನವನ್ನು ಮಾಡುವ ಹಿನ್ನೆಲೆಯನ್ನು ಮನಗಂಡು ಈ ಅಧ್ಯಯನದಲ್ಲಿ ತಳಸ್ಪರ್ಶಿಯಾಗಿ ಚರ್ಚಿಸಲಾಗಿರುತ್ತದೆ. ಹಾಗೆಯೇ ನಾಡಿನ ದೇಕಬ್ಬೆಯ ದೃಢ ಮನಸ್ಥಿತಿಯನ್ನು ಗಮನಿಸಿದ್ದರೆ, ಮನಹಿಂಡುವಂತೆ ಈ ಮೇಲಿನ ಶಾಸನದ ಸಾಲುಗಳು ತಿಳಿಸುತ್ತವೆ. ಅಷ್ಟೇ ಅಲ್ಲದೇ ತನ್ನ

[1].**ಸಂಶೋಧಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು**

ಪತಿಯ ಜೊತೆ ಸತಿಸಹಗಮನ ಮಾಡಿದಲ್ಲದೇ ತನ್ನ ತವರೂರಾದ ನುಗುನಾಡಿಗೆ ಚಿರಸ್ಮರಣೀಯ ಹೆಸರನ್ನು ನೀಡಿದ್ದಾಳೆ. ಈ ಉಲ್ಲೇಖ ಕೆಲವು ಶಾಸನಗಳಿಂದ ಸಿಕ್ಕಿವೆ ಎಂದು ಡಾ.ಚಂದ್ರೇಗೌಡ ಅವರ ಹೇಳಿಕೆ ಹಾಗೂ ಅವರು ಅನೇಕ ಸ್ಥಳಗಳನ್ನು ಅಧ್ಯಯನ ಮಾಡಿರುವುದನ್ನು ಕಾಣಲಾಗುತ್ತದೆ. ಅಂತೆಯೇ ಪ್ರಸ್ತುತ ಅಧ್ಯಯನಕ್ಕೆ ಪೂರಕವಾದ ಮಾಹಿತಿಯಾಗಿದ್ದು, ಇದರಲ್ಲಿ ಕೆಲವಾರು ಸ್ಥಳ ಮತ್ತು ಮಾಹಿತಿ ಸಂಗ್ರಹವನ್ನು ಕೂಡ ಮಾಡಲಾಗಿರುತ್ತದೆ.. ಹೀಗೆ, ಶಾಸನದ ಉಲ್ಲೇಖದಲ್ಲಿ ನುಗ್ಗೇಹಳ್ಳಿಯ ಮಹತ್ವದ ಬಗೆಗೆ ಖುದ್ದು ಕ್ಷೇತ್ರಕಾರ್ಯಕ್ಕೆ ಒಂದು ಪ್ರಧಾನ ಆಕಾರವಾಗಿಯೇ ಕಂಡುಕೊಳ್ಳಲಾಗಿರುತ್ತದೆ. ಮೂಲತಃ ಇಲ್ಲಿ ನುಗ್ಗೇಹಳ್ಳಿಯನ್ನು ಒಂದು ಕೇಂದ್ರ ಸ್ಥಳವಾಗಿ ಕಾಣುತ್ತೇವೆ.

**"ನುಗ್ಗೇಹಳ್ಳಿ ಎಂಬುವುದು 'ನುಗುನಾಡು' ಎಂಬುವುದರಿಂದ ಉಂಟಾದ ಸ್ಥಳನಾಮವಾಗಲೂ ಸಾಧ್ಯವಿದೆ. ಈ ಪ್ರದೇಶಕ್ಕೆ ನುಗುನಾಡು ಎಂಬ ಹೆಸರು ಬರಲು ಕಾರಣವೇನೆಂದು ನೋಡಿದರೆ; ನುಗ್ಗು ಎಂಬುದಕ್ಕೆ ಹಳಗನ್ನಡದ ನುರ್ಗು ಎಂಬ ಶಬ್ಧವೇ ಮೂಲ."** ಈ ನೆಲೆ ಮತ್ತು ಹಿನ್ನೆಲೆಯಲ್ಲಿ ನುಗುನಾಡು ಎಂಬ ಹೆಸರು ಬರಲು ಕಾರಣವನ್ನು ಸವಿಸ್ತಾರವಾಗಿ ಕಂಡುಕೊಳ್ಳಲಾಗಿದೆ. ಇಲ್ಲಿ ಕೇವಲ ಜಾನಪದರ ಬಾಯಿಂದ ಬಂದ ಹೆಸರಲ್ಲದೇ ಅನೇಕ ವರ್ಷಗಳಿಂದೆ ಇದ್ದಂತಹ ಹಳಗನ್ನಡ ಕಾವ್ಯಗಳಲೂ ಸಹ ನಾವು ನುಗು ಅಥವಾ ನುರ್ಗು ಎಂಬುದರ ಬಗೆಗೆ ತಿಳಿಯಬಹುದಾಗಿದೆ. ಹೀಗೆ, ಸಾಹಿತ್ಯ ಕ್ಷೇತ್ರಕ್ಕೂ ನುಗ್ಗೇಹಳ್ಳಿಗೂ ಅಪೂರ್ವವಾದ ಸಂಬಂಧವನ್ನು ಕಲ್ಪಿಸಲಾಗುವುದು. ಅದು ಹಳೆಗನ್ನಡ ಶಬ್ಧಗಳ ಮೂಲಕ ಕಂಡುಕೊಳ್ಳಲಾಗಿದೆ.

**"ಕರ್ನಾಟಕ ಸಸ್ಯಗಳ ಸಸ್ಯಶಾಸ್ತ್ರೀಯ ಕನ್ನಡ, ಕೊಂಕಣಿ, ತುಳು ಹೆಸರುಗಳು" ಎಂಬ ಗ್ರಂಥದಲ್ಲಿ ಉಲ್ಲೇಖ 137,167,181ರಲ್ಲಿ ಚಿಕ್ಕನಹುಲ್ಲು, ಬಿಳಿವು ನುಗದ ಹುಲ್ಲುಗಳನ್ನು ಹೆಸರಿಸಿದೆ."** ಎಂಬ ಹಿನ್ನೆಲೆಯನ್ನು ಬಹುಸೂಕ್ಷ್ಮವಾಗಿ ಗಮನಿಸಿದಾಗ; ನುಗುನಾಡಿನ ಮಹತ್ವದ ಬಗೆಗೆ ಘನ ಇತಿಹಾಸವನ್ನು ಕೆದಕಿದಂತೆ ಆಗುತ್ತದೆ. ನುಗುನಾಡಿನ ವಿಸ್ತಾರ ಅಥವಾ ವ್ಯಾಪ್ತಿಯ ಬಗೆಗೆ ಹಾಗೂ ಮತ್ತೊಂದು ನುಗುಹೊಳೆ ಎಂಬ ಸ್ಥಳದ ಬಗೆಗೆ ಚರ್ಚಿಸಲಾಗುತ್ತದೆ. ಅಷ್ಟೇ ಅಲ್ಲದೆ ಆ ಪ್ರದೇಶದಲ್ಲೊಂದು ನಿದರ್ಶನವನ್ನು ಸೂಕ್ಷ್ಮವಾಗಿ ಗ್ರಹಿಸಬಹುದು. ಅಲ್ಲಿ ಈಗಲೂ ಸಹ ನುಗುಹುಲ್ಲು ಹೇರಳವಾಗಿ ಬೆಳೆಯುತ್ತಿದೆ. ನಮ್ಮ ನಾಡಿನ ನಂಜನಗೂಡಿನ ಸಮೀಪದಲ್ಲಿ ನುಗುಹೊಳೆ ಇದೆ. ಅಲ್ಲಿಯೂ ಒಂದು ನುಗುನಾಡು ಎನ್ನುವುದು ಸಹ ಇದೆ ಎಂದು ತಿಳಿದು ಬರುತ್ತದೆ. ಅಲ್ಲಿಯ ಇತಿಹಾಸವು ಬಹಳಷ್ಟು ವಿಭಿನ್ನ ಎಂದು ಹೇಳಬಹುದು! ಅಂತಹ ಹಿನ್ನಲೆಯ ಕಥೆ; ಸಾವಿಗೆ ಹೆದರದೆ ಕದನಕ್ಕೆ ದುರ್ಗಮವಾದ ಕೋಟೆಗಳಿಗೆ ನುಗ್ಗುವವರಿಂದ ನುಗ್ಗೇಹಳ್ಳಿ ಎಂಬ ಹೆಸರು ಬಂದಿದೆ ಎಂಬ ಅಭಿಪ್ರಾಯವಿದೆ.

ಹೊಯ್ಸಳರ ಕಾಲದಲ್ಲಿ ಇಲ್ಲಿಯ ಜನ ಯುದ್ಧಗಳಲ್ಲಿ ಹಿಂದೆ ಮುಂದೆ ನೋಡದೆ ಪರಾಕ್ರಮದಿಂದ ಮುನ್ನುಗ್ಗುತ್ತಿದ್ದರು. ಈ ಕಾರಣಕ್ಕಾಗಿಯೇ ಈ ಊರು ನುಗ್ಗೇಹಳ್ಳಿ ಎಂದು ಹೆಸರಾಗಿದೆ. ಗೆಜೆಟಿಯರ್‌ಗಳು

ಚನ್ನರಾಯಪಟ್ಟನ ತಾಲ್ಲೂಕು ದರ್ಶನ ಮುಂತಾದ ಗ್ರಂಥಗಳಲ್ಲಿ ವಿವರಿಸಲಾಗಿದೆ. ಹೀಗೆ ನುಗ್ಗೇಹಳ್ಳಿ ಪ್ರದೇಶದ ಹೆಸರಿನ ಮೂಲವು **ನುಗ್ಗೇಮರ, ನುಗುನಾಡು, ನುಗುಹುಲ್ಲು, ನುಗ್ಗುವವರು** ಎಂಬ ಅನೇಕ ಅರ್ಥಅಂಶಗಳೊಡನೆ ಕಂಡುಕೊಳ್ಳಲಾಗಿದೆ. ಆದರೂ ಈ ಒಂದು ನಿರ್ಣಯಕ್ಕೆ ಬರುವುದು ಅತ್ಯಗತ್ಯ ಎನಿಸುತ್ತದೆ. ಏಕೆಂದರೆ ನನ್ನ ಮಹಾಪ್ರಬಂಧಕ್ಕೆ ಪೂರಕವಾಗಿ ನುಗುನಾಡಿನ ಇತಿಹಾಸ ಹಾಗೂ ಮಹತ್ವ ಬಹುಮುಖ್ಯವಾಗಿ ಪರಿಗಣಿಸಿದ್ದೇನೆ. ಆದಕಾರಣ ಪ್ರಾದೇಶಿಕ ಹಿನ್ನಲೆಯನ್ನು ಅವಲೋಕಿಸಿದ್ದಾಗ ನುಗುನಾಡಿಗೆ ಸಂಬಂಧಿಸಿದ್ದ ಶಾಸನಗಳಲ್ಲಿ ಉಲ್ಲೇಖಿಸಿರುವಂತೆ **ವಿಜಯನಗರ ಅರಸರ** ಕಾಲದಲ್ಲಿ ಈಗಿನ ನುಗ್ಗೇಹಳ್ಳಿ ನುಗುನಾಡಿನ ರಾಜಧಾನಿಯಾಗಿತ್ತು". ಬಹುಶಃ ಇಲ್ಲಿ ಹೇರಳವಾಗಿ ನುಗು ಹುಲ್ಲು ಬೆಳೆಯುತ್ತಿದ್ದ ಕಾರಣ ಈ ಪ್ರದೇಶವನ್ನು ನುಗುನಾಡು ಎಂದು ಕರೆಯಲಾಗಿದೆ. ಅಂತೆಯೇ ಧಾರ್ಮಿಕವಾಗಿ ನುಗ್ಗೆಹಳ್ಳಿಯ ಇತಿಹಾಸವನ್ನು ಕಂಡುಕೊಳ್ಳುವ ಸಾಧ್ಯತೆಯಿದೆ.

ನುಗ್ಗೇಹಳ್ಳಿಯು ಪ್ರಸಿದ್ಧವಾದ ನಾಡಾಗಿದೆ. ಏಕೆಂದರೆ, **ಅಲ್ಲಿ ಹೊಯ್ಸಳರ ಆಡಳಿತದಲ್ಲಿ ನಿರ್ಮಿಸಿದಂತಹ ಶ್ರೀ ಪ್ರಸನ್ನ ಕೇಶವ ಸ್ವಾಮಿ, ಲಕ್ಷ್ಮೀನರಸಿಂಹಸ್ವಾಮಿ ಹಾಗೂ ಶ್ರೀ ಗೋಪಾಲಸ್ವಾಮಿ ದೇವಾಲಯಗಳ ಶಿಲ್ಪಕಲಾ ಸೌಂದರ್ಯಕ್ಕೆ ಸಾಕ್ಷ್ಯಾಧಾರಗಳನ್ನು ನೋಡಬಹುದು**. ಈ ದೇವಾಲಯಗಳು ಭಿತ್ತಿ ಶಿಲ್ಪಗಳನ್ನು ಹೊಂದಿದು. ಇದರ ವಾಸ್ತುಶಿಲ್ಪದ ಲಕ್ಷಣವು ವಿಶೇಷವಾಗಿ ದ್ರಾವಿಡ ಮಿಶ್ರಿತ ನಾಗರ ವಾಸ್ತುವಿನಿಂದ ನಿರ್ಮಾಣವಾಗಿರುವುದನ್ನು ಕಾಣುತ್ತೇವೆ.

ನುಗುನಾಡಿನ ಸಂಸ್ಕೃತಿಯನ್ನು ಸಮಾಜದ ಮುಖ್ಯವಾಹಿನಿಯಲ್ಲಿ ಪ್ರಸ್ತುತಕ್ಕೆ ಕಂಡುಕೊಳ್ಳುವ ಅನಿವಾರ್ಯವಿದೆ. ಏಕೆಂದರೆ ನುಗ್ಗೇಹಳ್ಳಿಯ ಚರಿತ್ರೆ ಮತ್ತು ಸಂಸ್ಕೃತಿಯು ವೈದಿಕ ಹಾಗೂ ಅವೈದಿಕ ಪಂಥಗಳು, ಇಲ್ಲಿಯ ಆಚರಣೆ ಮತ್ತು ಚರಿತ್ರೆಯೊಂದಿಗಿನ ಕಥೆಗಳಲ್ಲಿ ಕಂಡುಕೊಳ್ಳಲಾಗಿದೆ. 10ನೇ ಶತಮಾನದ ಪಂಪಯುಗದಿಂದ 12ನೇ ಶತಮಾನದ ವಚನಯುಗದವರೆಗೆ, ಹಾಗೆಯೇ 16ನೇ ಶತಮಾನದ ಕೀರ್ತನೆ ಯುಗದವರೆಗೆ ಆಚರಣೆಗಳು ಭಿನ್ನವಾಗಿ ಕಂಡುಕೊಳ್ಳಲಾಗಿದೆ. ಈ ವಿಭಿನ್ನ ನೆಲೆಯ ಸಂಸ್ಕೃತಿಯನ್ನು ನುಗು ನಾಡಿನಲ್ಲಿ ಕಂಡುಕೊಳ್ಳಲಾಗಿದೆ. ಇಲ್ಲಿಯ ಚರಿತ್ರೆ ಬೇರೆ ಪ್ರಾದೇಶಿಕತೆಗಿಂತ ವಿಶಿಷ್ಟವಾಗಿ ಕಂಡಿದೆ. ಶತಮಾನಗಳಿಂದಲೂ ಕಂಡು ಅರಿಯದಷ್ಟು ಆಚರಣೆಗಳು ಇಲ್ಲಿದ್ದು, ಈ ಆಚರಣೆಗಳನ್ನು ಹಲವು ಗ್ರಾಮಗಳು ತನ್ನದೇ ಆದ ಇತಿಹಾಸ ಮತ್ತು ಸಂಸ್ಕೃತಿಯೊಂದಿಗೆ ಆಚರಿಸುತ್ತಾ ಬಂದಿದೆ.

ನುಗುನಾಡಿನ ಒಳಹೊಕ್ಕು ನೋಡಿದರೆ; ಸಮಗ್ರ ಸಂಸ್ಕೃತಿಯು ದರ್ಶನವಾಗುತ್ತದೆ. ಆದರೆ ಇಲ್ಲಿಯ ಸಂಸ್ಕೃತಿಯು ವಿಭಿನ್ನ ನೆಲೆಗಳಲ್ಲಿ ನುಗ್ಗೇಹಳ್ಳಿಯ ಉದ್ದಗಲಕ್ಕೂ ಕಾಣುತ್ತೇವೆ. ನುಗುನಾಡಿನ ಸಾಂಸ್ಕೃತಿಕ ಪರಂಪರೆಯನ್ನು ಅನಾದಿ ಕಾಲದಿಂದಲೂ ಬಳುವಳಿಯಾಗಿ ಬಂದಿರುವುದನ್ನು ಸ್ಥಳೀಯರಿಂದ ಕ್ಷೇತ್ರಕಾರ್ಯದ ಮೂಲಕ ಕಂಡುಕೊಳ್ಳಲಾಗಿದೆ.

"ದೊರೆ ಸೋಮೇಶ್ವರನ ಕಾಲದಲ್ಲಿ ಬೊಮ್ಮಣ್ಣ ಡಣಾಯಕನೆಂಬುವನು ಇಲ್ಲಿ, ಅಗ್ರಹಾರವೊಂದನ್ನು ಸ್ಥಾಪಿಸಿ ಅದಕ್ಕೆ ವಿಜಯ ಸೋಮನಾಥಪುರ ಎಂದು ನಾಮಕರಣ ಮಾಡಿದ." ಈ ಹಿನ್ನಲೆಯಲ್ಲಿ ನುಗ್ಗೇಹಳ್ಳಿ ಎಂಬುದನ್ನ ಕೆಲವು ಶಾಸನಗಳ ಆಧಾರದಿಂದ **ಸೋಮೇಶ್ವರನ ಜ್ಞಾಪಕಾರ್ಥವಾಗಿ ವಿಜಯ ಸೋಮನಾಥಪುರ** ಎಂಬ ಹೆಸರಿನಿಂದ ಕರೆಯುತ್ತಿದ್ದರು. ಹಾಗೆಯೇ ಕರ್ನಾಟಕದಲ್ಲಿಯೇ ಸಾಂಸ್ಕೃತಿಕ ಆಚರಣೆಯಲ್ಲಿ ವಿಶಿಷ್ಠತೆ ಪಡೆದಿರುವ, ನುಗ್ಗೇಹಳ್ಳಿ ಚರಿತ್ರೆಯು ಅಗ್ರಸ್ಥಾನ ಪಡೆಯುತ್ತದೆ. ಹೀಗಾಗಿಯೇ ಈ ಪ್ರದೇಶವನ್ನು ಅಂತರ್ಶಿಸ್ತೀಯ ಹಾಗೂ ಬಹುಶಿಸ್ತೀಯ ನೆಲೆಯಲ್ಲಿ ಗಮನಿಸಲಾಗುತ್ತದೆ. ನುಗು ನಾಡಿನ ಚರಿತ್ರೆಯನ್ನು ಜನಪರರು ಹೇಳುವ ಅಥವಾ ಸ್ಥಳೀಯ ಕಥೆಗಳಿಂದ ಬಹುಶಿಸ್ತೀಯ ನೆಲೆಯಲ್ಲಿ ಕಂಡುಕೊಳ್ಳಬಹುದಾಗಿದೆ. ಕೇವಲ ನುಗುನಾಡು ಚರಿತ್ರೆಯನ್ನು ಒಳಗೊಳ್ಳದೇ ಸಮಗ್ರ ಸಂಸ್ಕೃತಿಯನ್ನು ಪ್ರಾದೇಶಿಕ ಗಡಿದಾಟಿ ತನ್ನ ಅಸ್ಥಿತ್ವವನ್ನು ಉಳಿಸಿಕೊಂಡಿದೆ.

ಈಗಾಗಲೇ ತಿಳಿದಿರುವಂತೆ ನುಗ್ಗೇಹಳ್ಳಿಯನ್ನು ಪ್ರಾದೇಶಿಕವಾಗಿ ಆರು ಗ್ರಾಮಪಂಚಾಯಿತಿ, ಅರವತ್ತನಾಲ್ಕು ಗ್ರಾಮಗಳನ್ನು ಒಳಗೊಂಡಿದೆ. ಅಂತೆಯೇ ಚನ್ನರಾಯಪಟ್ಟಣ ತಾಲ್ಲೂಕಿಗೆ ಸೇರಿದ ಹೋಬಳಿಗಳಲ್ಲಿ ನುಗ್ಗೇಹಳ್ಳಿಯನ್ನು ಭೌಗೋಳಿಕವಾಗಿ, ಬಹುದೊಡ್ಡದಾಗಿ ಗುರುತಿಸಲಾಗಿದೆ. ಇಲ್ಲಿನ ವ್ಯಾಪಾರ ಮತ್ತು ವಾಣಿಜ್ಯ ಚಟುವಟಿಕೆಗಳಿಗೆ ಕೇಂದ್ರ ಸ್ಥಳವಾಗಿ ಪರಿಗಣಿಸಿ, ರೈತರಿಗೆ ಆರ್ಥಿಕವಾಗಿ ಸಹಕರಿಸುವ ಸ್ಥಳವೆಂದು ಸ್ಥಳೀಯರು ತಿಳಿಸುತ್ತಾರೆ. ಇಲ್ಲಿನ ಭೌಗೋಳಿಕ ವಿಸ್ತೀರ್ಣ 45.606.26(45.906.26) ಹೆಕ್ಟರ್ ಒಳಗೊಂಡಿದ್ದು, ಇದೊಂದು ಬಯಲುನಾಡು ಪ್ರದೇಶವಾಗಿರುತ್ತದೆ. ಇಲ್ಲಿಯ ಪ್ರಮುಖ ಬೆಳೆಗಳಾದ "ರಾಗಿ, ಭತ್ತ, ಕಬ್ಬು, ಶುಂಠಿ, ಜೋಳ, ಬಾಳೆ, ಅಡಿಕೆ ಹಾಗೂ ವಾಣಿಜ್ಯ ಬೆಳೆಯಾದ ತೆಂಗನ್ನು ಅಧಿಕ ಪ್ರಮಾಣದಲ್ಲಿ ಬೆಳೆಯುವುದರೊಂದಿಗೆ ಕೊಬ್ಬರಿಯನ್ನು ಯಥೇಚ್ಛವಾಗಿ ರಫ್ತಾಗುವುದನ್ನು ಕಾಣಬಹುದು. ಅಷ್ಟೇ ಅಲ್ಲದೆ ಹೈನುಗಾರಿಕೆಯು ಇತ್ತೀಚೆಗೆ ಆರ್ಥಿಕವಾಗಿ ಸಬಲವಾಗಲು ನೆರವಾಗಿದೆ. ಮುಖ್ಯವಾಗಿ ಇಲ್ಲಿನ ಜನಸಂಖ್ಯೆಯನ್ನು ಗಮನಿಸಿದಾಗ 2011ರ ಜನಗಣತಿಯ ಪ್ರಕಾರ 40.312.966 ಇದ್ದು ಇದರಲ್ಲಿ ಪುರುಷರು 19.966 ಮಹಿಳೆಯರು 20,346 ಇದ್ದು, ಮನೆಗಳ 10.110.9 ಯನ್ನು ಹೊಂದಿದೆ' ಆದ್ದರಿಂದಲೇ ನುಗ್ಗೇಹಳ್ಳಿಯನ್ನು ಆಡಳಿತ ಕೇಂದ್ರವಾಗಿ 64 ಗ್ರಾಮಗಳು ಒಳಗೊಂಡಿವೆ. ಹೀಗೆ ಜಾಗತೀಕ ಮಟ್ಟದಲ್ಲಿ ಗುರುತಿಸಿಕೊಂಡು ಆರ್ಥಿಕ ಸ್ವಾವಲಂಭನೆ ಗಳಿಸಿಕೊಂಡಿರುವ ಹಿನ್ನೆಲೆಯಲ್ಲಿ ನುಗ್ಗೇಹಳ್ಳಿಯು ಆಧುನಿಕ ಯುಗದಲ್ಲಿ ತನ್ನದೇ ಆದ ಮಹತ್ವವನ್ನು ಗಳಿಸಿದೆ.

ಧರ್ಮಗಳಿಗೆ ಅನುಗುಣವಾಗಿ ಬಂದಿರುವ ಆಚರಣೆಗಳನ್ನು ಇತರೆ ಪ್ರಾದೇಶಿಕ ನೆಲೆಗಳಿಗಿಂತ ಭಿನ್ನವಾಗಿ ಕಂಡುಕೊಳ್ಳಬಹುದು. ಇಲ್ಲಿ ಕೇವಲ ಧಾರ್ಮಿಕ ಚರಿತ್ರೆಗಳಲ್ಲದೇ ನಾನಾ ಬಗೆಯ ಸಾಂಸ್ಕೃತಿಕ ಪಲ್ಲಟಗಳ ಪರಿಯನ್ನು ಗಮನಿಸಬಹುದಾಗಿದೆ. ಅನಾದಿ ಕಾಲದಿಂದಲೂ ನಡೆದು ಬಂದಿರುವ ನಂಬಿಕೆ ಹಾಗೂ ಆಚರಣೆಯೊಂದಿಗೆ ಪ್ರಸ್ತುತ ಧರ್ಮ, ಧರ್ಮಗಳಲ್ಲಿ ಮತಾಂತರವಾಗಿರುವುದನ್ನು

ಕಂಡುಕೊಳ್ಳಬಹುದು. ಸರಿ–ಸುಮಾರು ವರ್ಷಗಳ ಹಿಂದೆಯೇ ಈ ನೆಲ ಬರಿ ಸಂಘರ್ಷದ ರಾಜಕಾರಣಕ್ಕೆ ಒಳಪಟ್ಟಿತು.ಆದರೆ ಪ್ರಸ್ತುತ ಕಾಲಘಟ್ಟದಲ್ಲಿ ಆಯಾಯ ಧರ್ಮಗಳಲ್ಲಿ ಬದಲಾವಣೆಯಾಗಿದೆ. ಅನುಕೂಲಕ್ಕೆ ತಕ್ಕಂತೆ ಇಲ್ಲಿನ ಜನಸಾಮಾನ್ಯರ ಜೀವನ ಕ್ರಮವು ಉಜ್ವಲ ಸ್ಥಿತಿಯತ್ತ ಸಾಗಿ ಧಾರ್ಮಿಕವಾಗಿ, ಶೈಕ್ಷಣಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ಕಲೆ ವಿದ್ವತ್ತಿಗೆ ಹೆಸರಾಗಿ ಸಾಧನೆ ಮತ್ತು ಅಭಿವೃದ್ಧಿಯತ್ತ ಈ ನೆಲ ಸಾಧಿಸಿರುವುದನ್ನು ಗುರುತಿಸಬಹುದು. ವಿಶೇಷ ದಿನಗಳಂದು ನಡೆಯುವ ವೀರಗಾಸೆಕುಣಿತ, ಸೋಮನಕುಣಿತ, ಮಾರಿಕುಣಿತ, ಮುಂತಾದ ಕಲೆಗಳನ್ನು ಇಲ್ಲಿ ಕಾಣಬಹುದು. ಹೀಗಾಗಿ ಈ ಪ್ರದೇಶ ನೆಲ, ಜಲ, ಕಲೆ, ಸಂಸ್ಕೃತಿ ಹಾಗೂ ಸಾಹಿತ್ಯಗಳ ಬಗೆಗೂ ಅವಲೋಕಿಸಿಕೊಳ್ಳಲಾಗಿದೆ. ನುಗ್ಗೇಹಳ್ಳಿಯ ಸ್ಥಳ ಪ್ರಸರಣಗಳ ಬಗ್ಗೆ ಜನಪದರ ನಂಬಿಕೆಯನ್ನು ಒಳಗೊಂಡಂತೆ ವಿವಿಧ ಆಯಾಮಗಳನ್ನು ತಿಳಿಸಿಕೊಡಲಾಗಿದೆ. ಒಟ್ಟಾರೆ ನುಗುನಾಡಿನ ಸಂಸ್ಕೃತಿಯು ವಿಭಿನ್ನ ನೆಲೆಗಳಿಂದ ಕೂಡಿದ್ದು, ಜನಪದರ ಗ್ರಹಿಕೆಯಲ್ಲಿ ನುಗ್ಗೇಹಳ್ಳಿಯು ತನ್ನದೇ ಆದ ಅಸ್ತಿತ್ವ ಮತ್ತು ಮಹತ್ವದೊಂದಿಗೆ ಸ್ಪಷ್ಟವಾಗಿ ಚರ್ಚಿಸುವ ಮೂಲಕ ಗುರುತಿಸಿಕೊಂಡಿದೆ.

**ಪರಾಮರ್ಶನ ಗ್ರಂಥಗಳು**

1. ಪಾಳೆಯಗಾರರ ಶಾಸನಗಳು, ಸಂಪುಟ – 02, ಪ್ರಧಾನ ಸಂಪಾದಕರು: ಪ್ರೊ.ಕೆ.ಎನ್.ಗಂಗಾನಾಯಕ್, ಡಾ. ಪುಟ್ಟಸ್ವಾಮಿ, ಪ್ರಕಾಶಕರು: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು, 2012
2. ಹಾಸನ ಜಿಲ್ಲೆಯ ಅಂಕಿ–ಅಂಶಗಳ ನೋಟ–2020–21, ಪ್ರಕಾಶಕರು: ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಕಛೇರಿ ಹಾಸನ, ಕರ್ನಾಟಕ ಸರ್ಕಾರ, 2021–22
3. ಸಾಂಸ್ಕೃತಿಕ ಅಧ್ಯಯನ, ರಹಮತ್ ತರೀಕೆರೆ, ಪ್ರಕಾಶಕರು: ಅಭಿನವ ಮಾರೇನಹಳ್ಳಿ, ವಿಜಯನಗರ, ಬೆಂಗಳೂರು, 2017
4. ಹಾಸನ ಜಿಲ್ಲೆಯ ಜನಪದ ಕಲಾವಿದರು, ಡಾ.ಹಂಪನಹಳ್ಳಿ ತಿಮ್ಮೇಗೌಡ, ಪ್ರಕಾಶಕರು: ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ, ಬೆಂಗಳೂರು, 2008
5. ಬಹು ಸಂಸ್ಕೃತಿ ಮತ್ತು ದೇಶಿ ಜಾತ್ರೆಗಳ ಮಹಾಸಮನ್ವಯ, ಡಾ.ಹೆಬ್ಬಾಲೆ ಕೆ. ನಾಗೇಶ, ಪ್ರಕಾಶಕರು: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2022
6. ನೆಲ ಸಂಸ್ಕೃತಿ, ನರಹಳ್ಳಿ ಬಾಲಸುಬ್ರಹ್ಮಣ್ಯ, ಪ್ರಕಾಶಕರು: ಸುಮುಖ ಪ್ರಕಾಶನ, ವಿದ್ಯಾರಣ್ಯನಗರ, ಮಾಗಡಿ ರಸ್ತೆ, ಬೆಂಗಳೂರು, 2006

7. ಜನಪದ ಕಾವಡಿ ಹಬ್ಬಗಳು ಸಾಂಸ್ಕೃತಿಕ ಅಧ್ಯಯನ, ಡಾ.ವೈ.ಚಂದ್ರಬಾಬು ಮಳುಬಾಗಿಲು, ಪ್ರಕಾಶಕರು: ಅಂಜಲಿ ಪ್ರಕಾಶನ, ಮುಳಬಾಗಿಲು, ಕೋಲಾರ ಜಿಲ್ಲೆ, 2010
8. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಾ.ಎಚ್.ತಿಪ್ಪೇರುದ್ರಸ್ವಾಮಿ, ಪ್ರಕಾಶಕರು: ಡಿ.ವಿ.ಕೆ. ಮೂರ್ತಿ ಪ್ರಕಾಶನ, ಕೃಷ್ಣಮೂರ್ತಿಪುರಂ, ಮೈಸೂರು, 2016
9. ಹಾಸನ ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಸಂಪಾದಕರು, ಡಾ. ಆರ್ ಗೋಪಾಲ್, ಪ್ರಕಾಶಕರು: ಪಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ವಸ್ತು ಪ್ರದರ್ಶನ ಆವರಣ, ಮೈಸೂರು, 2010
10. ಚನ್ನರಾಯಪಟ್ಟಣ ತಾಲ್ಲೂಕಿನ ಸ್ಥಳನಾಮಗಳ ಅಧ್ಯಯನ, ಡಾ. ಚಂದ್ರೇಗೌಡ. ಎನ್, ಪ್ರಕಾಶಕರು: ಅರ್ಪಿತಾ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್, ಕುವೆಂಪುನಗರ, ಮೈಸೂರು, 2013